**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ**

**ಅಸಲು ದಾವಾ ಸಂ.285/2013**
**PW-1**

**ಪಾಟೀ ಸವಾಲು ಶ್ರೀ ಜಿ.ಬಿ.ಬಿ ಪ್ರತಿವಾದಿಯರ ಪರ ವಕೀಲರಿಂದ**

**ಸಾಕ್ಷಿಗೆ ದಿನಾಂಕ 18.10.2021 ರಂದು ಪ್ರಮಾಣ ವಚನ ಬೋಧಿಸಲಾಯಿತು.**

1. ಸ.ನಂಃ 55 ರಲ್ಲಿ ಆರು ಪಟ್ಟಿಗಳಾಗಿವೆ ಎಂದರೆ ಸರಿಯಲ್ಲ. ನಮ್ಮ ವಕೀಲರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದ ಗ್ರಾಮನಕಾಶೆ ಮಾಹಿತಿ ನೀಡಿರುತ್ತೇನೆ. ನಮ್ಮ ವಕೀಲರಿಗೆ ಮಾಹಿತಿ ನೀಡುವ ಸಮಯದಲ್ಲಿ ಸ. ನಂಃ 55 ರಲ್ಲಿ ನಾಲ್ಕು ಪಟ್ಟಿಗಳ ಬಗ್ಗೆ ಮಾಹಿತಿ ನೀಡಿಲ್ಲ. ಸಾಕ್ಷಿಗೆ ವಾದಪತ್ರದ ಜೊತೆಗೆ ನೀಡಿರುವ ಕಚ್ಚಾ ನಕಾಶೆಯನ್ನು ತೋರಿಸಿ ಸರಿಯಾಗಿದೆಯೋ ತಪ್ಪಾಗಿದೆಯೋ ಎಂದರೆ ಸಾಕ್ಷಿ ನಾನು ಶಾಲೆ ಕಲೆತ್ತಿಲ್ಲ ಅದಕ್ಕೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ಬಸಪ್ಪರವರ ಜಮೀನುಗಳ ಮಧ್ಯ ಬಾಳಪ್ಪ ಮತ್ತು ಸಿದ್ದಪ್ಪರವರು ಜಮೀನು ಬರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಒಂದು ಕಡೆಗೆ ಬರುತ್ತದೆ ಎಂದು ನುಡಿಯುತ್ತಾರೆ. 2 ನೇ ವಾದಿ ಬಸಪ್ಪ ಬಾಳಪ್ಪ ಮುದಕವಿರವರ ಜಮೀನಿನ ದಕ್ಷಿಣಕ್ಕೆ ಬಾಳಪ್ಪ ಮತ್ತು ಸಿದ್ದಪ್ಪರವರ ಜಮೀನು ಬರುತ್ತದೆ ಎಂದರೆ ನಿಜ. ಸದರಿ ಬಾಳಪ್ಪ ಮತ್ತುಸಿದ್ದಪ್ಪರವರ ಜಮೀನಿನ ದಕ್ಷಿಣಕ್ಕೆ ನನ್ನ ಜಮೀನು ಬರುತ್ತದೆ ಎಂದರೆ ನಿಜ. ಸ.ನಂಃ 55/1 ಎ, ಸ.ನಂಃ 55/1 ಬಿ ಮತ್ತು ಸ.ನಂಃ 55/2 ಜಮೀನುಗಳ ವಸ್ತುಸ್ಥಿತಿಯನ್ನು ನನ್ನ ವಾದಪತ್ರದೊಂದಿಗೆ ಸಲ್ಲಿಸಿದ ಕಚ್ಚಾನಕ್ಷೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ನನ್ನ, ಬಾಳಪ್ಪ ಮತ್ತು ಸಿದ್ದಪ್ಪರವರ ಜಮೀನುಗಳು ಪೂರ್ವ -ಪಶ್ಚಿಮವಾಗಿ ಶೀಳಿ ಉತ್ತರ ದಿಕ್ಕಿನ ಪಟ್ಟಿ ಒಬ್ಬರಿಗೆ, ದಕ್ಷಿಣ ದಿಕ್ಕಿನ ಪಟ್ಟಿ ಒಬ್ಬರಿಗೆ ಹಾಗೂ ಮದ್ಯದ ಪಟ್ಟಿ ಒಬ್ಬರಿಗೆ ನೀಡಲಾಗಿರುತ್ತದೆ ಎಂದರೆ ನಿಜ.

2. ಸ.ನಂಃ 55/2 ರ ಜಮೀನಿನ ಪಹಣಿ ಪತ್ರಿಕೆಯಲ್ಲಿ ಪಾರ್ವತಿ, ಸಿಗೊಂಡಪ್ಪ ರಮೇಶ, ಶಿವಪ್ಪ , ಮಂಜು ಹಾಗೂ ಪೂಜಪ್ಪರವರ ಹೆಸರು ಇವೆ ಎಂದರೆ ನಿಜ. ಸದರಿ ಐದು ಜನರಿಂದ ಅಧಿಕಾರ ಪತ್ರವನ್ನು ತೆಗೆದುಕೊಂಡು ದಾವೆ ಸಲ್ಲಿಸಿಲ್ಲ ಆದರೆ ಅವರ ಒಪ್ಪಿಗೆ ಪಡೆದುಕೊಂಡು ದಾವೆ ಸಲ್ಲಿಸಿರುತ್ತೇನೆ. ನನ್ನ ಜಮೀನಿನ ಉತ್ತರಕ್ಕಿರುವ ಜಮೀನಿನ ಮಾಲೀಕರಾದ ಬಾಳಪ್ಪ ಹಾಗೂ ಸಿದ್ದಪ್ಪರವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಅವರು ಹಾಗೂ ನಾವು ಕೂಡಿಯೇ ಈ ದಾವೆ ಸಲ್ಲಿಸಿರುತ್ತೇವೆಂದು ನುಡಿಯುತ್ತಾರೆ. ನನ್ನ ಜಮೀನಿನ ದಕ್ಷಿಣಕ್ಕೆ ಪ್ರತಿವಾದಿ ಮಾಯಪ್ಪ ಹಾಗೂ ಶರಣಪ್ಪ ಮುದಕವಿರವರ ಜಮೀನು ಬರುತ್ತದೆ ಎಂದರೆ ನಿಜ. ಪ್ರತಿವಾದಿ ಮಾಯಪ್ಪ ಹಾಗೂ ಶರಣಪ್ಪ ಮುದಕವಿರವರ ಜಮೀನುಗಳ ದಕ್ಷಿಣಕ್ಕೆ ತಡಲಗಿ - ನಾಗರದಿನ್ನಿ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ನಿಜ.

3. ಶರಣಪ್ಪ ಮುದಕವಿರವರ ಜಮೀನಿನ ಪೂರ್ವಕ್ಕೆ ಹಿರೇಮಠರವರ ಜಮೀನು ಇದೆ ಎಂದರೆ ನಿಜ. ಸದರಿ ಹಿರೇಮಠರವರ ಜಮೀನು ಶರಣಪ್ಪ ಮುದಕವಿರವರ ಜಮೀನಿನವರೆಗೆ ಮಾತ್ರ ಬರುತ್ತಿದ್ದು ಸಂಪೂರ್ಣ ಸ.ನಂಃ 55 ರವರೆಗೆ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪುನಃ ಸಾಕ್ಷಿ ಶರಣಪ್ಪ ಮುದಕವಿರವರ ಜಮೀನು ಸ.ನಂಃ 55 ರವರೆಗೆ ಬರುವುದಿಲ್ಲ ಎಂದುನುಡಿಯುತ್ತಾರೆ. ಸದರಿ ಹಿರೇಮಠರವರ ಜಮೀನಿನ ಪೂರ್ವಕ್ಕೆ ಕೆನಾಲ ಹಾದುಹೋಗಿದೆ ಎಂದರೆ ನಿಜ. ಸದರಿ ಕೆನಾಲ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಎರಡು ಬದಿಗೆ ಚಕ್ಕಡಿ ರಸ್ತೆ ಇದೆ ಎಂದರೆ ಸರಿಯಲ್ಲ ಸಾಕ್ಷಿ ಹಿರೇಮಠರವರ ಜಮೀನು ಕೆನಾಲ ಮದ್ಯದಲ್ಲಿ ಕೆನಾಲ ರಸ್ತೆ ಇದೆ ಎಂದು ನುಡಿಯುತ್ತಾರೆ. ಕೆನಾಲ ಪಕ್ಕದಲ್ಲಿ ನಾನು , ಬಸಪ್ಪ ಕುರಿಶೆಡ್ಡುಗಳನ್ನು ಹಾಕಿರುತ್ತೇವೆ ಎಂದರೆ ಸರಿ ಸಾಕ್ಷಿ ಮುಂದುವರೆದು ಶೆಟ್ಟರ ಜಮೀನಿನಲ್ಲಿ ಶೆಡ್ಡುನ್ನು ಹಾಕಿಕೊಂಡಿರುತ್ತೇವೆಂದು ನುಡಿಯುತ್ತಾರೆ. ಕೆನಾಲ ಪಕ್ಕದಲ್ಲಿರುವ ಎರಡು ರಸ್ತೆಗಳು ಹತ್ತು ಸರ್ವೇ ನಂಬರ ಆದ ನಂತರ ಎರಡೂ ರಸ್ತೆಗಳು ಕೂಡಲು ಸೇತುವೆ ಇದೆ ಎಂದರೆ ನಿಜ. ಸ.ನಂಃ 55/3 ಮಾಯಪ್ಪ ಮುದಕವಿರವರು ತಮ್ಮ ಜಮೀನಿನಲ್ಲಿ ಸುಮಾರು 20 ವರ್ಷಗಳ ಹಿಂದೆ ನೀರಿನ ಹೊಂಡ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಇತ್ತೀಚೆಗೆ ಕೆನಾಲ ಬಂದ ನಂತರ ನೀರಿನ ಹೊಂಡ ಹಾಕಿರುತ್ತಾರೆಂದು

ನುಡಿಯುತ್ತಾರೆ. ಕೆನಾಲ ಬಂದು ಸುಮಾರು 10 ರಿಂದ 15 ವರ್ಷಗಳಾಗಿರಬಹುದು. ದಾವೆ ಮಾಡುವ ಸಮಯದಲ್ಲಿ ಪ್ರತಿವಾದಿ ಜಮೀನಿನ ಪಶ್ಚಿಮಕ್ಕೆ ನೀರಿನ ಹೊಂಡ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಶರಣಪ್ಪ ಮುದಕವಿರವರ ಜಮೀನು ಇದೆ ಎಂದರೆ ನಿಜ. ಸದರಿ ಶರಣಪ್ಪ ಮುದಕವಿರವರ ಜಮೀನಿನ ಪೂರ್ವಕ್ಕೆ ಗೌರವ್ವ ದೊಡ್ಡಭೀಮಪ್ಪ ಮುದಕವಿ ಹಾಗೂ ಶರಣಪ್ಪ ದೊಡ್ಡಭೀಮಪ್ಪ ಮುದಕವಿರವರ ಜಮೀನುಗಳು ಇವೆ ಎಂದರೆ ನಿಜ. ಸ.ನಂಃ 55 ರಲ್ಲಿ ದಕ್ಷಿಣೋತ್ತರ ಮುಖವಾಗಿ ಮೂರು ಪಟ್ಟಿ ಹಾಗೂ ಪೂರ್ವ-ಪಶ್ಚಿಮವಾಗಿ ಮೂರು ಪಟ್ಟಿಗಳನ್ನು ಮಾಡಲಾಗಿದೆ ಎಂದರೆ ಸಾಕ್ಷಿ ದಕ್ಷಿಣೋತ್ತರವಾಗಿ ನಾಲ್ಕು ಪಟ್ಟಿಗಳು ಇವೆ ಎಂದು ನುಡಿಯುತ್ತಾರೆ.

4. ನಿಪಿ 2 ಕಬೂಲಾಯತಿ ಪತ್ರ ಯಾವಾಗ ತಯಾರಿಸಲಾಗಿದೆ ಎಂದರೆ ಸಾಕ್ಷಿ ನಾನು ಶಾಲೆ ಕಲೆತಿರದ ಕಾರಣ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 2 ಕಬೂಲಾಯತಿ ಪತ್ರಕ್ಕೆ ಪ್ರತಿವಾದಿ ಮಾಯಪ್ಪ ಮುದಕವಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ರಸ್ತೆ ವಿಚಾರವಾಗಿ ನಾವು , ಪ್ರತಿವಾದಿ ಹಾಗೂ ಹಿರಿಯರು ಸುಮಾರು ಎರಡುಮೂರು ಬಾರಿ ಸಭೆ ಮಾಡಿರುತ್ತೇವೆ. ಕಬೂಲಾಯತಿ ಪತ್ರವನ್ನು ಮೊದಲನೇ ಬಾರಿ ಕೂಡಿದ ಸಭೆಯಲ್ಲಿ ಮಾಡಲಾಗಿರುತ್ತದೆ. ಮೊದಲನೇ ಸಭೆಯಾದ ಎರಡು ವರ್ಷಗಳ ನಂತರ ಮೂರನೇ ಸಭೆ ಮಾಡಿರುತ್ತೇವೆ. ನಿಪಿ 2 ರ ಕಬೂಲಾಯತಿ ಪತ್ರ ತಯಾರಿಸಿದ ಎಷ್ಟು ದಿನಗಳ ನಂತರ ಸಭೆ ಮಾಡಿರುತ್ತೀರಿ ಎಂದರೆ ಸಾಕ್ಷಿ ನಾನು ಶಾಲೆ ಕಲೆಯದ ಕಾರಣ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ.

5. ನಿಪಿ 2 ರ ಛಾಪಾ ಕಾಗದ ಎಷ್ಟು ಮುಖಬೆಲೆಯ ಛಾಪಾಕಾಗದವಾಗಿದೆ ಎಂದರೆ ಸಾಕ್ಷಿ ಸದರಿ ಛಾಪಾಕಾಗದವನ್ನು ನಮ್ಮ ಅಣ್ಣನಾದ ಮಾಯಪ್ಪ ಸಿಂಗೊಂಡಪ್ಪ ಮುದಕವಿ ತರಿಸಿರುತ್ತಾರೆಂದು ನುಡಿಯುತ್ತಾರೆ. ನಿಪಿ 2 ರ ದಾಖಲೆಯನ್ನು ಶರಣಯ್ಯ ಹಿರೇಮಠ ಎನ್ನುವವರು ಬರೆದಿರುತ್ತಾರೆ. ನಿಪಿ 2 ರ ದಾಖ್ಲೆಗೆ ನಾನು ಪಕ್ಷಗಾರರಾಗಿ ಸಹಿ ಮಾಡಿರುತ್ತೇನೆ. ನಿಪಿ 2 ರ ಛಾಪಾ ಕಾಗದದ ಕೊನೆ ಪುಟದ ದಸ್ತುರ ಕೆಳಗೆ **ತಾರೀಖು <u>13.9</u>**.1994 ಎಂದು , ಅದೇ ರೀತಿ

ನಿಪಿ 2 ರ 3 ನೇ ಪುಟದಲ್ಲಿ ದಿನಾಂಕಃ **13.09**.1994 ರ ತಾರೀಖನ್ನು ಸಹ ತಿದ್ದಿ ಬರೆಯಲಾಗಿದೆ ಎಂದರೆ ಸಾಕ್ಷಿ ಅಕ್ಷರದಲ್ಲಿ ಏನೂ ಗೊತ್ತಾಗುವುದಿಲ್ಲವೆಂದು ನುಡಿಯುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಅದೆ.** ನನ್ನ ಸಮಕ್ಷಮ

**ಸಿವ್ಹಿಲ್ ನ್ಯಾಯಾಧೀಶರು**
**ಬಸವನ ಬಾಗೇವಾಡಿ.**